ದಿನಾಂಕಃ **04.12.2024**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯ್ತು.

ಮುಂದುವರೆದ ಪಾಟೀ ಸವಾಲುಃ **6** ಮತ್ತು **7** ನೇ ಪ್ರತಿವಾದಿ ಪರ ವಕೀಲರಿಂದಃ-

ಐಟಂ ನಂಬರ್ 2 ಅಂದರೆ ಸರ್ವೆ ನಂಬರ್ 35 ರಲ್ಲಿ 1 ಎಕರೆ 31 ಗುಂಟೆ ಇದೆ. ಸದರಿ ಆಸ್ತಿಯನ್ನು 5 ನೇ ಪ್ರತಿವಾದಿಗೆ 3 ನೇ ಪ್ರತಿವಾದಿ ಮಾರಾಟ ಮಾಡಿದ್ದಾರೆ. 1 ಎಕರೆ 31 ಗುಂಟೆಯಲ್ಲಿ ದಕ್ಷಿಣ ಭಾಗದ 17 ಗುಂಟೆ ದ್ಯಾವಪ್ಪನ ಹೆಂಡತಿಯಾದ ಹುಲುಗವ್ವನಿಗೆ, ನಾಗಮ್ಮನಿಗೆ ಉತ್ತರ ಭಾಗದ 18 ಗುಂಟೆ ಎನ್ನುವುದು ನನಗೆ ಗೊತ್ತಿಲ್ಲ. 1987-88 ರಲ್ಲಿ ಮೇಲೆ ಹೇಳಿದಂತೆ ಖಾತೆ ಸಹ ಆಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಎಂ.ಆರ್ 8/1987-88 ರಂತೆ ನಾಗಮ್ಮನಿಗೆ 18 ಗುಂಟೆ ಖಾತೆಯಾಯಿತು ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು 22 ಗುಂಟೆಯಾಗಿತ್ತು ಎನ್ನುತ್ತಾರೆ. ಹುಲುಗೆಮ್ಮನ ಹೆಸರಿನಲ್ಲಿದ್ದ ಆಸ್ತಿಯನ್ನು 3 ನೇ ಪ್ರತಿವಾದಿ ಖಾತೆ ಮಾಡಿಸಿಕೊಂಡಿದ್ದಾರೆ. 3 ನೇ ಪ್ರತಿವಾದಿ ಯಾರೆಂದು ನನಗೆ ಹೇಳಲಿಕ್ಕಾಗುವುದಿಲ್ಲ.

ಕೊಟ್ರಪ್ಪನ ಇಬ್ಬರು ಮಕ್ಕಳು ನನಗೆ ಗೊತ್ತಿಲ್ಲ. ಅವರ ಮಕ್ಕಳೆಂದರೆ ದ್ಯಾವಪ್ಪ ಮತ್ತು ಕೊಟ್ರಪ್ಪ ಎನ್ನುವುದು ನನಗೆ ಗೊತ್ತಿಲ್ಲ. ದ್ಯಾವಪ್ಪನ ತಮ್ಮ ಕೊಟ್ರಪ್ಪನ ಮಗಳೇ ಈ ಕೇಸಿನ 3 ನೇ ಪ್ರತಿವಾದಿ ಎನ್ನುವುದು ಸರಿಯಲ್ಲ. 3 ನೇ ಪ್ರತಿವಾದಿಯನ್ನು ನೋಡಿದ್ದೇನೆ. 3 ನೇ ಪ್ರತಿವಾದಿಯ ಗಂಡನ ಹೆಸರು ನಿಂಗಪ್ಪ. 3 ನೇ ಪ್ರತಿವಾದಿಯ ಮಗಳು 4 ನೇ ಪ್ರತಿವಾದಿ. ದ್ಯಾವಪ್ಪನಿಗೆ ಕೊಟ್ರಪ್ಪ ಮತ್ತು ಸಾವಮ್ಮ ಎನ್ನುವ ಇಬ್ಬರು ಮಕ್ಕಳು ಎನ್ನುವುದು ಸರಿಯಲ್ಲ. ದ್ಯಾವಪ್ಪನ ಮಗ ಕೊಟ್ರಪ್ಪ, ಕೊಟ್ರಪ್ಪನ ಹೆಂಡತಿ ನಾಗಮ್ಮ ಎನ್ನುವುದು ಸರಿ. ದ್ಯಾವಪ್ಪ ನಾಗಮ್ಮನನ್ನು ಸೊಸೆಯಾಗಿ ಮನೆಗೆ ತಂದರು ಎಂದರೆ ಸರಿ. ನಾಗಮ್ಮನ ಮೂಲ ಊರು ನಮ್ಮ ಊರೆ. ನಾಗಮ್ಮನ ಊರು ನ್ಯಾಮತಿ ತಾಲ್ಲೂಕಿನ ಕಾಡತ್ತಿನಹಳ್ಳಿ ಎನ್ನುವುದು ಸರಿಯಲ್ಲ.

ನಾಗಮ್ಮನ ತಮ್ಮ ಲೋಕಪ್ಪ. ನಾಗಮ್ಮನ ಕುಟುಂಬವೇ ಬೇರೆ ಲೋಕಪ್ಪನ ಕುಟುಂಬವೇ ಬೇರೆ ಎಂದರೆ ಸರಿಯಲ್ಲ. ನಾಗಮ್ಮನನ್ನು ಸೊಸೆಯಾಗಿ ತಂದಾಗ ಲೋಕಪ್ಪ ಆ ಮನೆಯಲ್ಲಿ ಇರಲಿಲ್ಲ ಎಂದರೆ ಸರಿ. ಲೋಕಪ್ಪನ ತಂದೆ ಬಸಪ್ಪ ನಮ್ಮ ಊರಿನವರೇ. ಲೋಕಪ್ಪ ಮತ್ತು ಬಸಪ್ಪ ನಮ್ಮ ಊರಿನವರೇ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ವಾದಿಯರು ಬಸಪ್ಪನ ಆಸ್ತಿಗೆ ಸಂಬಂಧಪಟ್ಟಂತೆ ಈ ದಾವೆಯನ್ನು ಹಾಕಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ದ್ಯಾವಪ್ಪನ ಕುಟುಂಬಕ್ಕೆ ಸಂಬಂಧಪಟ್ಟ ಆಸ್ತಿಗಳು ಎಂದರೆ ಸರಿ. ದ್ಯಾವಮ್ಮನ ಮಗಳಾದ ಹುಲಿಗೆಮ್ಮನ ಹೆಸರಿಗೆ ಇದ್ದ 1 ಎಕರೆ 9 ಗುಂಟೆಯನ್ನು ಹಿರಿಯಮ್ಮ ಎನ್ನುವವರು ಖಾತೆ ಮಾಡಿಸಿಕೊಂಡರು ಎಂದರೆ ಸರಿ. ದ್ಯಾವಪ್ಪನ ತಮ್ಮನ ಮಗಳಾಗಿದ್ದರಿಂದ ಹಿರಿಯಮ್ಮ ಖಾತೆ ಮಾಡಿಸಿಕೊಂಡರು ಎಂದರೆ ಸರಿಯಲ್ಲ. ಹಿರಿಯಮ್ಮನ ಹೆಸರಿಗೆ ಖಾತೆ ಮ್ಯುಟೇಷನ್ ಆಗಿದೆ ಎಂದರೆ ಸರಿ. ಅವರು ವಾರಸುದಾರರಾಗಿದ್ದರಿಂದಲೇ ಕಂದಾಯ ಇಲಾಖೆಯವರು ಅವರ ಹೆಸರಿಗೆ ಕಾನೂನು ಪ್ರಕಾರ ಖಾತೆ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ಸದರಿ ಆಸ್ತಿಗಳಲ್ಲಿ ಲೋಕಪ್ಪನಿಗಾಗಲೀ ಮತ್ತು ಅವರ ವಾರಸುದಾರರಿಗಾಗಲೀ ಯಾವುದೇ ಹಕ್ಕಿಲ್ಲ ಎನ್ನುವುದು ಸರಿಯಲ್ಲ.

ಸರ್ವೆ ನಂಬರ್ 110/1 ರಲ್ಲಿ ಮೂಲತಃ 3 ಎಕರೆ 32 ಗುಂಟೆ ಇತ್ತು ಎನ್ನುವುದು ಸರಿ. ಸದರಿ ಸರ್ವೆ ನಂಬರ್ ನ ದಕ್ಷಿಣ ಭಾಗದ 1 ಎಕರೆ 36 ಗುಂಟೆಯನ್ನು ಹುಲಿಗೆಮ್ಮನಿಗೆ ಕೊಟ್ಟರು ಎಂದರೆ ಸರಿ. ಉಳಿದ 1 ಎಕರೆ 36 ಗುಂಟೆ ನಾಗಮ್ಮನ ಹೆಸರಿಗೆ ಇತ್ತು. ಈ ದಾವೆಯಲ್ಲಿ ನಾವು 1 ಎಕರೆ 36 ಗುಂಟೆ ಮಾತ್ರ ಸೇರಿಸಿದ್ದೇವೆ ಎಂದರೆ ಸರಿ. ಬಾಕಿ 1 ಎಕರೆ 36 ಗುಂಟೆಯನ್ನು ಏಕೆ ಸೇರಿಸಿಲ್ಲ ಎಂದರೆ ಸಾಕ್ಷಿ ನಾಗಮ್ಮ ತನ್ನ ತಮ್ಮನ ಮಕ್ಕಳಿಗೆ ವಿಲ್ ಮೂಲಕ 1 ಎಕರೆ 36 ಗುಂಟೆಯನ್ನು ಬರೆದುಕೊಟ್ಟಿದ್ದಾರೆ ಆದುದರಿಂದ ಸೇರಿಸಿಲ್ಲ ಎನ್ನುತ್ತಾರೆ. ಒಟ್ಟು ಕುಟುಂಬದ ಎಲ್ಲಾ ಆಸ್ತಿಗಳನ್ನು ಸೇರಿಸದೇ ಇರುವುದರಿಂದ ನಮ್ಮ ದಾವೆ ಊರ್ಜಿತವಲ್ಲ ಎನ್ನುವುದು ಸರಿಯಲ್ಲ. ನಾಗಮ್ಮನ ಗಂಡನ ಸ್ವತ್ತುಗಳು ದಾವಾ ಆಸ್ತಿಗಳಾಗಿರುವುದರಿಂದ ಲೋಕಪ್ಪನಿಗಾಗಲೀ ಅಥವಾ ಅವರ ವಾರಸುದಾರರಿಗಾಗಲೀ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎನ್ನುವುದು ಸರಿಯಲ್ಲ.

ಹುಲಿಗೆಮ್ಮನಿಗೆ ಸಾವಮ್ಮ ಎನ್ನುವ ಮಗಳಿದ್ದಳು, ಸಾವಮ್ಮನನ್ನು ನೆಲವಾಗಿಲಿಗೆ ಮದುವೆ ಮಾಡಿಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ. ಸಾವಮ್ಮನಿಗೆ 6 ಜನ ಮಕ್ಕಳಿದ್ದಾರೆ ಎನ್ನುವುದು ಗೊತ್ತಿಲ್ಲ. ಈ ಕೇಸಿನ 6 ಮತ್ತು 7 ನೇ ಪ್ರತಿವಾದಿಯರು ಸಾವಮ್ಮನ ಮಕ್ಕಳು ಎನ್ನುವುದು ನನಗೆ ಗೊತ್ತಿಲ್ಲ. ಸಾವಮ್ಮನಿಗೆ ಗೌರಮ್ಮ, ಮಹದೇವಿ, ಶಾಂತ ಮತ್ತು ಜಯಕಲಾ ಎನ್ನುವ ಮಕ್ಕಳಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಅವರನ್ನು ಪಾರ್ಟಿ ಮಾಡದೇ ಇರುವುದರಿಂದ ನನ್ನ ದಾವೆ ಊರ್ಜಿತವಲ್ಲ ಎನ್ನುವುದು ಸರಿಯಲ್ಲ. ಹುಲಿಗೆವ್ವನ ಗಂಡ ತೀರಿಕೊಂಡ ನಂತರ ಅವರ ಮಗಳ ಮನೆಯಲ್ಲಿ ವಾಸವಾಗಿದ್ದಾರೆ ಎನ್ನುವುದು ಸರಿಯಲ್ಲ. ಹುಲಿಗೆಮ್ಮ ನೆಲವಾಗಿಲು ಗ್ರಾಮದಲ್ಲಿ ದಿಃ 26.12.1982 ರಲ್ಲಿ ಮರಣ ಹೊಂದಿದರು ಎನ್ನುವುದು ಸರಿಯಲ್ಲ. ಹುಲಿಗೆಮ್ಮ 6 ಮತ್ತು 7 ನೇ ಪ್ರತಿವಾದಿ ಹೆಸರಿಗೆ ದಾನ ಪತ್ರ ಮಾಡಿಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ. ಸದರಿ ದಾನಪತ್ರವು ನೋಂದಣಿಯಾಗಿರುತ್ತದೆ ಎಂದರೆ ಸರಿ. ಸದರಿ ದಾನಪತ್ರವನ್ನು ನಾಗಮ್ಮನಾಗಲೀ ಅಥವಾ ಬೇರೆಯವರಾಗಲೀ ಇದುವರೆಗೂ ಪ್ರಶ್ನೆ ಮಾಡಿಲ್ಲ ಎನ್ನುವುದು ಸರಿ. ನನ್ನ ದಾವೆಯಲ್ಲಿ ಹೇಳಿದ ಹಾಗೆ ಹುಲಿಗೆಮ್ಮ ದಿಃ 02.11.1969 ರಲ್ಲಿ ತೀರಿಕೊಂಡರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 6 ನ್ನು ಲಪಟಾಯಿಸುವ ಉದ್ದೇಶದಿಂದ 6 ಮತ್ತು 7 ನೇ ಪ್ರತಿವಾದಿಯರ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ದಾನಪತ್ರದಂತೆ 6 ಮತ್ತು 7 ನೇ ಪ್ರತಿವಾದಿಗೆ ಖಾತೆಯಾಗಿದೆ ಎಂದರೆ ಸಾಕ್ಷಿ ತಹಶೀಲ್ದಾರ್ ಕಚೇರಿಯಲ್ಲಿ ಮಾಡಿಸಿಕೊಂಡಿದ್ದಾರೆ ಎನ್ನುತ್ತಾರೆ. ಆ ರೀತಿ ಖಾತೆ ಮಾಡಿಸಿಕೊಳ್ಳುವಾಗ ಲೋಕಪ್ಪನ ವಾರಸುದಾರರು ತಕರಾರು ಕೊಟ್ಟಿದ್ದರು ಎಂದರೆ ಸರಿ. ಅವರು ಸಲ್ಲಿಸಿದ ತಕರಾರು ಊರ್ಜಿತವಲ್ಲ ಎಂದು ಅವರ ತಕರಾರನ್ನು ವಜಾಗೊಳಿಸಿದರು ಎನ್ನುವುದು ಸರಿಯಲ್ಲ. ಹುಲಿಗೆಮ್ಮ ನೆಲವಾಗಿಲಲ್ಲಿ ವಾಸವಾಗಿದ್ದರು ಎಂದು ಹೇಳಲು ನೆಲವಾಗಿಲಿನ ಎಲೆಕ್ಷನ್ ಲೀಸ್ಟ್ ನಲ್ಲಿ ಅವರ ಹೆಸರು ನೊಂದಣಿಯಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂಬರ್ 151/5 ರಲ್ಲಿ 11 ಗುಂಟೆ , 151/1 ಬಿ ಯಲ್ಲಿ 3 ಗುಂಟೆ, 110 ರ ಪೈಕಿ 1 ಎಕರೆ 36 ಗುಂಟೆ ದ್ಯಾವಪ್ಪ, ಕೊಟ್ರೇಶಪ್ಪ ಮತ್ತು ಶಿವರಾಜ್ ಗೆ ವಿಲ್ ಮಾಡಿದ್ದಾರೆ. ಸದರಿ ವಿಲ್ಲನ್ನು ಆಧರಿಸಿ ನಾನು

ಪ್ರೊಬೇಟ್ ಅರ್ಜಿಯನ್ನು ಸಲ್ಲಿಸಿಲ್ಲ. ರೆವಿನ್ಯೂ ಅಧಿಕಾರಿಗಳೊಂದಿಗೆ ಶಾಮೀಲಾಗಿ ಪ್ರೊಬೇಟ್ ಆಗದೇ ಇದ್ದರೂ ಸಹ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ 6 ರಲ್ಲಿ ಹಿರಿಯಮ್ಮ ಗಂಡನ ಹೆಸರು ನಿಂಗಪ್ಪ ಎನ್ನುವ ಹೆಸರು ಇದೆ ಎಂದರೆ ಸರಿ. ಸರ್ವೆ ನಂಬರ್ 35/2 ನ್ನು ಹುಲಿಗೆಮ್ಮನ ವಾರಸುದಾರರು ನಾವೆ ಎಂದು 3 ನೇ ಪ್ರತಿವಾದಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. ವಾದಿಯರು ಮತ್ತು 1 ಮತ್ತು 2 ನೇ ಪ್ರತಿವಾದಿಯರು ಈ ಹಿಸ್ಸೆ ದಾವೆಯನ್ನು ದಾಖಲಿಸಲು ಬಾಧ್ಯಸ್ಥದಾರರಲ್ಲ ಎಂದರೆ ಸರಿಯಲ್ಲ. ಲೋಕಪ್ಪ ಮತ್ತು ನಾಗಮ್ಮನ ಕುಟುಂಬ ಬೇರೆ ಬೇರೆ ಎಂದರೆ ಸಾಕ್ಷಿ ಅವರು ಮದುವೆಯಾದ ಮೇಲೆ ಬೇರೆ ಬೇರೆ ಎನ್ನುತ್ತಾರೆ. ನಾನು ಸುಳ್ಳು ದಾವೆಯನ್ನು ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಲು ವಾದಿಯರಿಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.
ಮರು ವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಗಣಕೀಕೃತ ಮಾಡಲಾಗಿದೆ.

ಓ ಹೇ ಕೇ ಸ ಇದೆ.

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶಿಕಾರಿಪುರ.